

सरयू

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

ಸಂಪುಟ–2 | ಸಂಚಿಕೆ 6 | 5114/ನಂದನ ಸಂ। | ಶ್ರಾವಣ/ಆಗಸ್ಟ್ 2012 | ಪುಟಗಳು : 8



## ಎಳೆಮಕ್ಕಳೊಳು ತಿಳಿವು ಮೊಳೆತು ಬೆಳೆವುದು ನೋಡು

**ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ (ರಿ.)**

ಹನುಮಾನ್ ನಗರ, ಕಲ್ಲಡ್ಕ. ಬಂಟ್ವಾಳ ತಾಲೂಕು, ದ.ಕ. 574 222. ದೂ. : 08255-275183

Email: info@srvk.org website: www.srvk.org Fax: 08255-275183

## ಸಂಪಾದಕೀಯ.....

ಎಲ್ಲರ ಅಗತ್ಯಗಳನ್ನು ಪೂರೈಸುವ ತಾಕತ್ತು ನಮ್ಮ ನಿಸರ್ಗಕ್ಕಿದೆ. ಆದರೆ ದುರಾಸೆಗಳನ್ನಲ್ಲ ಎಂಬ ಮಹಾತ್ಮಾ ಗಾಂಧಿಯವರ ಎಚ್ಚರಿಕೆಯ ಮಾತುಗಳನ್ನು ನಾವು ಗಾಳಿಗೆ ತೂರಿಬಿಟ್ಟಿದ್ದೇವೆ. ಪ್ರಕೃತಿ ನಮಗೆ ಬದುಕಲು ಬೇಕಾಗಿರುವ ಅನ್ನ, ಆಹಾರ, ನೀರು, ಗಾಳಿ, ಮಣ್ಣು ಎಲ್ಲವನ್ನೂ ಕೊಟ್ಟಿದೆ. ಆದರೆ ಪ್ರತಿಯಾಗಿ ನಾವು ಪ್ರಕೃತಿಗೇನಾದರೂ ಕೊಟ್ಟಿದ್ದೇವೆಯೇ ? ಒಂದು ವೇಳೆ ಕೊಟ್ಟಿದ್ದರೆ ಹಿಂಸೆ, ನೋವು ಮಾತ್ರ. ನಮ್ಮನ್ನು ಪೋಷಿಸಿ ಬೆಳೆಸಿದ ಪ್ರಕೃತಿಯ ಮೇಲೆ ನಡೆಸುವ ಅತ್ಯಾಚಾರದಂತಹ ಅನ್ಯಾಯ ಜಗತ್ತಿನಲ್ಲಿ ಬೇರೊಂದಿರಲಿಕ್ಕಿಲ್ಲ.

ಭೂಮಿಯಲ್ಲಿ ಮನುಷ್ಯ ಅತ್ಯಂತ ವಿಕಸಿತ ಪ್ರಾಣಿ, ಬುದ್ಧಿವಂತ ಪ್ರಾಣಿ ಎಂಬುದಾಗಿ ಪರಿಗಣಿಸಲ್ಪಟ್ಟಿದ್ದಾನೆ. ಆದರೆ ಮನುಷ್ಯನಷ್ಟು ಕೃತಘ್ನ ಪ್ರಾಣಿ ಈ ಜಗತ್ತಿನಲ್ಲಿ ಬೇರೊಂದಿರಲಿಕ್ಕಿಲ್ಲವೇನೋ...?

ಪ್ರಾಯಶಃ ವಿಕಾಸವಾದಂತೆ ಬುದ್ಧಿವಂತನಾದಂತೆ ಮನುಷ್ಯ ಹೆಚ್ಚು ಸ್ವಾರ್ಥಿ ಆಗುತ್ತಾನೇನೋ...?

ಎಲ್ಲರನ್ನು ಸಾಕಿ ಸಲಹುವ ಈ ಭೂಮಿಗೆ ನಮ್ಮ ಕೊಡುಗೆಯಾದರೂ ಏನು ? ಈ ಭೂಮಿಯ ಮೇಲೆ ಜೀವಿಸುವ ಎಲ್ಲ ಜೀವಿಗಳಿಗೆ ಆಹಾರ ಒದಗಿಸುವ, ಆಧಾರ ಒದಗಿಸುವ ಭೂಮಾತೆ ಎಲ್ಲ ಜೀವಿಗಳ ಜೀವನಾಧಾರ. ಆದರೆ ಅಂತಹ ಭೂಮಿಯನ್ನೇ ನಾವು ನಾಶಮಾಡಲು ಹೊರಟಿರುವುದು ನಮ್ಮ ಬುದ್ಧಿಗೇಡಿತನವಲ್ಲದೆ ಮತ್ತಿನ್ನೇನು ? ನಮ್ಮ ಸುಖಕ್ಕಾಗಿ ಪರಿಸರವನ್ನು ಭೂಮಿಯನ್ನು ನಾಶಮಾಡಬೇಕಾಗಿಲ್ಲ. ಪರಿಸರವನ್ನು ನಾಶಮಾಡದೆ ಅದರೊಂದಿಗೆ ಬದುಕುವುದರಲ್ಲಿ ಸಂತೋಷವಿದೆ. ಹಾಗಾದಾಗಲೇ ನಮ್ಮ ಬದುಕಿಗೊಂದು ಅರ್ಥ-ಸಾರ್ಥಕ್ಯ ಎರಡೂ ಸಾಧ್ಯ. ಈ ರೀತಿಯ ಚಿಂತನೆಯನ್ನೂ, ಶಿಕ್ಷಣವನ್ನೂ ವಿದ್ಯಾರ್ಥಿ ದೆಸೆಯಲ್ಲೇ ನೀಡಿದಾಗ ಅದು ಪರಿಣಾಮಕಾರಿಯಾಗಬಲ್ಲದು ಎಂಬ ದೃಷ್ಟಿಯಿಂದ ಕೃಷಿ ಕಾರ್ಯದಂತಹ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವುದರ ಹಿಂದಿರುವ ಉದ್ದೇಶ.

**ಕೃಷಿತೋ ನಾಸ್ತಿ ದುರ್ಭಿಕ್ಷಂ.**


### "ಸರಯೂ" ಸಂಪಾದಕ ಮಂಡಳಿ

ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :
ನಾರಾಯಣ ಸೋಮಯಾಜಿ, ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
ಸಹಸಂಪಾದಕರು :
ದಿವ್ಯಾ ಕುಮಾರಿ, ಸುಮಿತ್ರಾ ಎಸ್.ಜಿ., ಮೃದುಲಾ ಹೆಗ್ಡೆ,
ಮಹೇಶ ನೆಟ್ಲ, ಶಕೀಲಾ ಕುಮಾರಿ, ಜಯಾನಂದ ಪೆರಾಜೆ
ವ್ಯವಸ್ಥಾಪಕ ಸಂಪಾದಕರು :
ಸತೀಶ ಭಟ್, ಶಿವಗಿರಿ
ಕಾರ್ಯನಿರ್ವಾಹಕ ಸಂಪಾದಕರು :
ಕೃಷ್ಣಪ್ರಸಾದ ಕಾಯರ್‌ಕಟ್ಟೆ
ವಿನ್ಯಾಸ :
ಕುಶಾಲಪ್ಪ ಅಮ್ಟೂರು


ಚಿಂತನರಶ್ಮಿ

## ಮಾತೃಭೂಮಿ

ಮರ್ಯಾದಾ ಪುರುಷೋತ್ತಮನಾದ ಶ್ರೀರಾಮಚಂದ್ರನು ಲೋಕಕಂಟಕನಾದ ರಾವಣನನ್ನು ಕೊಂದು ಬಂಗಾರದಿಂದ ನಿರ್ಮಿತವಾದ ಶ್ರೀಮಂತ ನಗರ ಲಂಕೆಯನ್ನು ಜಯಿಸಿದರೂ ಕಳವಳಗೊಳ್ಳುತ್ತಾನೆ. ಚಂಚಲಚಿತ್ತನಾದ ಶ್ರೀರಾಮಚಂದ್ರನನ್ನು ನೋಡಿ ಲಕ್ಷ್ಮಣನು "ಅಣ್ಣ ಏಕೆ ಇನ್ನೂ ಚಿಂತಾಕ್ರಾಂತನಾಗಿರುವೆ? ಸೀತಾ ಮಾತೆಯು ದೊರಕಿದ್ದಾಳೆ. ಇಂಥ ಈ ಶ್ರೀಮಂತ ನಾಡಿನಲ್ಲಿ ಸುಮ್ಮನೆ ಏಕೆ ದುಃಖಿಸುತ್ತಿರುವೆ?" ಎನ್ನುತ್ತಾನೆ. ಆಗ ಶ್ರೀರಾಮನು "ಅಪಿ ಸ್ವರ್ಣಮಯಿ ಲಂಕಾ ನಮೇ ಲಕ್ಷ್ಮಣ ರೋಚತೇ। ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ"ಎನ್ನುತ್ತಾನೆ. ಅಂದರೆ ರಾವಣನನ್ನು ಕೊಂದ ಬಳಿಕ ಅಂಥ ಸುವರ್ಣ ನಗರಿಯಲ್ಲಿ ರಾಮನೇ ಸಾರ್ವಭೌಮನಾಗಿ ಆಳಬಹುದಾಗಿತ್ತು. ಆದರೆ ಶ್ರೀರಾಮ ಅಂದು ಯಾವುದನ್ನೂ ಅಪೇಕ್ಷಿಸದೆ ವಿಭೀಷಣನಿಗೆ ಪಟ್ಟ ಕಟ್ಟಿ, ಎಷ್ಟು ಹೊತ್ತಿಗೆ ಮರಳಿಯೇನು- ಎನ್ನುವ ದುಗುಡ ಅವನಲ್ಲಿ ತುಂಬಿತ್ತು. ಇದು ಶ್ರೀರಾಮಚಂದ್ರನ ಮಾತೃಭೂಮಿಯ ಮಮಕಾರದ ಒಂದು ಸಣ್ಣ ಘಟನೆ.

"ನ ಮಾತುಃ ಪರದೈವತಮ್" ಎಂಬಂತೆ ತಾಯಿಗಿಂತ ಮಿಗಿಲಾದ ದೇವರಿಲ್ಲ; ತಾಯಿಯ ನಂತರ ಅಭಿಮಾನದಿಂದ ಹೇಳಿಕೊಳ್ಳಬಹುದಾದ ಮಾತೆಯೆಂದರೆ ರಾಷ್ಟ್ರಮಾತೆ; ಮಾತೃಭೂಮಿ. ನನ್ನ ದೇಶ, ನನ್ನ ಜನ, ನನ್ನ ಊರೆಂದರೆ ಎಂಥವರಿಗೂ ಅಭಿಮಾನ. ಮಾತೃಭೂಮಿಯನ್ನು ನೆನೆದುಕೊಂಡರೆ ಸಾಕು; ಏನೋ ಒಂದು ಬಗೆಯ ರೋಮಾಂಚನ! ನಮ್ಮ ಭೂಮಿ, ನಮ್ಮ ದೇಶಕ್ಕಾಗಿ ಹಿಂದಿನಿಂದಲೂ ಹೋರಾಡಿದವರು ಅದೆಷ್ಟು ಮಂದಿ! ಅವರೆಲ್ಲರಿಗೂ ಇದ್ದುದು ಮುಖ್ಯವಾಗಿ ದೇಶಭಕ್ತಿ; ರಾಷ್ಟ್ರದ ಮೇಲಿರುವ ಅಪಾರ ಅಭಿಮಾನ!

ಸ್ವಾಮಿ ವಿವೇಕಾನಂದರು ಧರ್ಮಜಾಗೃತಿಗಾಗಿ ಪಾಶ್ಚಾತ್ಯ ದೇಶದಲ್ಲೆಲ್ಲ ತಮ್ಮ ಪ್ರತಿಭೆಯನ್ನು ಬೀರಿ, ಇನ್ನೇನು ತಾಯ್ನಾಡಿಗೆ ಮರಳಬೇಕು ಎಂದು ಸನ್ನಾಹ ನಡೆಸುತ್ತಿದ್ದಾಗ ಅವರ ಒಬ್ಬ ಪಾಶ್ಚಾತ್ಯ ಸ್ನೇಹಿತ "ಸ್ವಾಮೀಜಿ ನಮ್ಮ ಈ ಭೋಗಭರಿತ, ವೈಭವಾನ್ವಿತ ಬಲಿಷ್ಠ ದೇಶದಲ್ಲಿ ಇದುವರೆಗೆ ನೀವಿದ್ದಿರಿ. ಈಗ ನಿಮ್ಮ ತಾಯ್ನಾಡಿಗೆ ಮರಳಬೇಕು ಎನಿಸಿದಾಗ ನಿಮಗೆ ನಿಮ್ಮ ಜನ್ಮಭೂಮಿ ಈಗ ಹೇಗೆ ಕಾಣಿಸುತ್ತದೆ?" ಎಂದು ಕೇಳುತ್ತಾನೆ. ಆಗ ಸ್ವಾಮಿ ವಿವೇಕಾನಂದರು "ನನ್ನ ಜನ್ಮಭೂಮಿ ಎಷ್ಟೊಂದು ಸಂಸ್ಕೃತಿಗಳ ಸಂಗಮ! ಇಲ್ಲಿಗೆ ಬರುವ ಮುನ್ನ ನನಗೆ ನನ್ನ ದೇಶ ಭಾರತ ಮಾತ್ರವಾಗಿತ್ತು. ಆದರೆ ಇಲ್ಲಿಗೆ ಬಂದು ಇಲ್ಲಿನ ವೈಭವೋಪೇತ ಜೀವನ ಕಂಡು, ನನ್ನ ಭಾರತದ ಧೂಳಿನ ಕಣ-ಕಣವೂ ಪವಿತ್ರವೆನಿಸುತ್ತಿದೆ. ಅಲ್ಲಿನ ನೆಲ- ಜಲ- ಗಾಳಿ ಒಂದೊಂದೂ ಅತ್ಯಂತ ಪವಿತ್ರ. ನನಗೆ ಅದೇ ಪುಣ್ಯಭೂಮಿ; ತೀರ್ಥಕ್ಷೇತ್ರ; ಎಲ್ಲವೂ; ಎಂದು ಮೈಮರೆತು ಎಷ್ಟೋ ಹೊತ್ತು ಕಣ್ಣುಮುಚ್ಚಿ, ತನ್ಮಯವಾಗಿದ್ದು ಬಿಟ್ಟರಂತೆ. ಆದ್ದರಿಂದ ವಿವೇಕವುಳ್ಳವರೆಲ್ಲರೂ ಪ್ರೀತಿಸುವುದು, ಸ್ವರ್ಗಕ್ಕಿಂತಲೂ ಮಿಗಿಲಾದ ತಮ್ಮ ಜನ್ಮಭೂಮಿಯನ್ನು. ಮಾತೃಭೂಮಿಯಲ್ಲಿ ಅಂಥ ಸೆಳೆತವಿದೆ: ಪ್ರೀತಿ ಇದೆ; ವಾತ್ಸಲ್ಯವಿದೆ. ಆದ್ದರಿಂದ ಪ್ರತಿಯೊಬ್ಬರೂ ಮಾತೃಭೂಮಿಯನ್ನು ಪ್ರಾಣಕ್ಕಿಂತಲೂ ಮಿಗಿಲಾಗಿ ಪ್ರೀತಿಸಬೇಕು; ಆರಾಧಿಸಬೇಕು.

■

# ಶಿಶುಮಂದಿರ ವಿಭಾಗ

## ಸಜೀಪ ಶ್ರೀಕೃಷ್ಣ ಶಿಶುಮಂದಿರದ ಪಾಲಕರ ಸಭೆ

ಶ್ರೀರಾಮ ಶಿಶುಮಂದಿರದ ಆಶ್ರಯದಲ್ಲಿ ನಡೆಯುವ ಸಜೀಪದ ಕಂದೂರಿನ ಶ್ರೀಕೃಷ್ಣ ಶಿಶುಮಂದಿರದಲ್ಲಿ ದಿನಾಂಕ 03–07–2012 ಮಂಗಳವಾರದಂದು ಮಕ್ಕಳ ಹೆತ್ತವರ ಸಭೆ ನಡೆಯಿತು. ಡಾ॥ ಪ್ರಭಾಕರ ಭಟ್ (ಸಂಚಾಲಕರು , ಶ್ರೀರಾಮ ವಿದ್ಯಾಕೇಂದ್ರ) ಆಗಮಿಸಿ ಮಾರ್ಗದರ್ಶನ ಮಾಡಿದರು. ಶ್ರೀಯುತ ನಾರಾಯಣ ಸೋಮಯಾಜಿ (ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ) ಇವರು ಉಪಸ್ಥಿತರಿದ್ದರು. ಪಾಲಕರೊಂದಿಗೆ ತಮ್ಮ ಮಕ್ಕಳಲ್ಲಿ ಆದ ಬದಲಾವಣೆ, ಒಳ್ಳೆಯ ದಿನಚರಿ, ಹಿರಿಯರ ಬಗ್ಗೆ ಗೌರವ–ಶ್ರದ್ಧೆ ಹೀಗೆ ಅನೇಕ ವಿಚಾರಗಳ ಬಗ್ಗೆ ಮಾಹಿತಿಯುಕ್ತ ಸಂವಾದ ನಡೆಯಿತು. ಶಾಂತಿಮಂತ್ರದೊಂದಿಗೆ ಪಾಲಕರ ಸಭೆ ಮುಕ್ತಾಯವಾಯಿತು.

## ವರಮಹಾಲಕ್ಷ್ಮೀ ಪೂಜೆ ಮತ್ತು ರಕ್ಷಾಬಂಧನ

ಶ್ರಾವಣ ಮಾಸದ ಮೊದಲನೇ ಶುಕ್ರವಾರದಂದು ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದ ಮೂರೂ ಶಿಶುಮಂದಿರಗಳಲ್ಲಿ ವರಮಹಾಲಕ್ಷ್ಮೀ ಪೂಜೆ ಮತ್ತು ರಕ್ಷಾಬಂಧನ ಕಾರ್ಯಕ್ರಮ ನಡೆಯುತ್ತದೆ. ಶ್ರೀರಾಮ ಶಿಶುಮಂದಿರದ ವತಿಯಿಂದ ದುರ್ಗಾಪರಮೇಶ್ವರಿ ದೇವಸ್ಥಾನ ಮುಲಾರು ಇಲ್ಲಿ





ನಡೆದ ಕಾರ್ಯಕ್ರಮದಲ್ಲಿ ಸುಮಾರು 400ರಷ್ಟು ವ್ರತಧಾರಿಗಳು ಸೇರಿದ್ದರು. ಬಿ.ಸಿ.ರೋಡಿನ ನ್ಯಾಯವಾದಿಗಳಾದ ಶ್ರೀ ಪ್ರಸಾದ್ ಇವರು ಧಾರ್ಮಿಕ ಉಪನ್ಯಾಸಕರಾಗಿ ಆಗಮಿಸಿದ ಈ ಕಾರ್ಯಕ್ರಮದಲ್ಲಿ ಶ್ರೀ ರಮೇಶ್ ಗುಂಡೂರು ಇವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಗಣೇಶ ಶಿಶುಮಂದಿರ ಬೊಂಡಾಲ ಇದರ ಆಶ್ರಯದಲ್ಲಿ ಶ್ರೀ ಶಾರದಾ ಭಜನಾ ಮಂದಿರ ವೀರಕಂಭ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುಮಾರು 500ರಷ್ಟು ಭಕ್ತಾಭಿಮಾನಿಗಳು ಸೇರಿದ್ದರು. ಶ್ರೀಮತಿ ಸುಧಾ ಭಟ್ ಧಾರ್ಮಿಕ ಉಪನ್ಯಾಸಗೈದರು. ಶ್ರೀಮತಿ ಜಯಂತಿ ಅಧ್ಯಕ್ಷರಾಗಿ ಉಪಸ್ಥಿತರಿದ್ದರು.

ಶ್ರೀ ಕೃಷ್ಣ ಶಿಶುಮಂದಿರ ಸಜೀಪ ಇದರ ಆಶ್ರಯದಲ್ಲಿ ಶ್ರೀ ನಂದಾವರ ದೇವಸ್ಥಾನದಲ್ಲಿ ವರಮಹಾಲಕ್ಷ್ಮೀ ವ್ರತ ನಡೆಯಿತು. ಕಾರ್ಯಕ್ರಮದಲ್ಲಿ 1000ಕ್ಕೂ ಹೆಚ್ಚಿನ ವ್ರತಧಾರಿಗಳು ಶ್ರದ್ಧಾ ಭಕ್ತಿಗಳಿಂದ ಭಾಗವಹಿಸಿದ್ದರು. ಶ್ರೀಮತಿ ಆಶಾಪ್ರಸಾದ್ ಬಿ.ಸಿ.ರೋಡ್ ಇವರು ಧಾರ್ಮಿಕ ಪ್ರವಚನ ಮಾಡಿದರು.

# ಪ್ರಾಥಮಿಕ ಶಾಲಾ ವಿಭಾಗ

## ವ್ಯಾಸಪೂರ್ಣಿಮೆ

ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ವೇದವ್ಯಾಸ ಧ್ಯಾನಮಂಟಪದಲ್ಲಿ ದಿನಾಂಕ 07–07–2012ರ ಶನಿವಾರದಂದು ವ್ಯಾಸ ಪೂರ್ಣಿಮೆ ಮತ್ತು




ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು. ಗುರು ಎಂಬ ಪದ ಪವಿತ್ರವಾದದ್ದು. ಒಬ್ಬ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಯಲ್ಲಿ ಗುರುವಿನ ಪಾತ್ರ ಮಹತ್ವವಾದದ್ದು ಎಂದು ಬಂಟ್ವಾಳ ತಾಲೂಕು ಕಾರ್ಯವಾಹಿಕಾ ಶ್ರೀಮತಿ ಸಾವಿತ್ರಿ ವಸಂತ ಮಾಧವ ವ್ಯಾಸ ಪೂರ್ಣಿಮೆಯ ಮಹತ್ವವನ್ನು ತಿಳಿಸಿದರು. ವೇದಿಕೆಯಲ್ಲಿದ್ದ ಶಾಲಾಭಿವೃದ್ಧಿ ಸಮಿತಿಯ ಸಹಕಾರ್ಯದರ್ಶಿಯಾದ ನಾಗರಾಜ್ ಮಕ್ಕಳಿಗೆ ಶುಭಹಾರೈಸಿದರು. ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ವಿದ್ಯಾಭಾರತಿ ಕರ್ನಾಟಕ ಇದರ ಆಶ್ರಯದಲ್ಲಿ ನಡೆದ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ ಶಶಾಂಕ್ ಆರ್.ವಿ, ಸುಶಾನ್, ಯಶಸ್ವಿನಿ ಈ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಶಿಕ್ಷಕರಾದ ಶ್ರೀ ಪ್ರಕಾಶ್ ಸ್ವಾಗತಿಸಿ, ಶ್ರೀ ಹರೀಶ್ ನಿರೂಪಿಸಿ, ಶ್ರೀಮತಿ ಅನ್ನಪೂರ್ಣಾ ವಂದಿಸಿದರು.

**ಶಾಲಾ ಸಂಸತ್ತು**

ವಿದ್ಯಾರ್ಥಿ ಸಂಸತ್ತಿನ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆಯಿತು. ವಿದ್ಯಾರ್ಥಿಗಳು ಪ್ರಮಾಣ ವಚನ ಸ್ವೀಕರಿಸಿದ ನಂತರ ಗೋಳ್ತಮಜಲು ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ವಿದ್ಯಾಕೇಂದ್ರದ ಪೋಷಕರಾದ ಶ್ರೀಯುತ ಮೋನಪ್ಪ ದೇವಸ್ಯ ಮಾತನಾಡಿ " ವಿದ್ಯಾರ್ಥಿ ಜೀವನ ಸಿಹಿ– ಕಹಿಗಳ ಸಮ್ಮಿಲನ. ರಾಜಕೀಯ ಪರಿಕಲ್ಪನೆ ಮಕ್ಕಳಲ್ಲಿ ಮೂಡಿಸಲು ಶಾಲಾ ಸಂಸತ್ತಿನ ರಚನೆ ಸಹಕಾರಿಯಾಗುತ್ತದೆ ಎಂದು ಹೇಳಿ ಮಕ್ಕಳಿಗೆ ಶುಭಹಾರೈಸಿದರು. ವಿದ್ಯಾಕೇಂದ್ರದ ಸದಸ್ಯರಾದ ಶ್ರೀಯುತ ಗೋಪಾಲ ಶೆಣೈ ಕಂಟಿಕ ಶಾಲಾಭಿವೃದ್ಧಿ ಸಮಿತಿಯ ಸದಸ್ಯರಾದ ಶ್ರೀಮತಿ ಪುಷ್ಪ ಸುರೇಶ್ ಪರ್ಕಳ ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ಜೊತೆಜೊತೆಯಾಗಿ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮ ನಡೆಯಿತು. ಶ್ರೀಮತಿ ರೂಪಕಲಾ ಸ್ವಾಗತಿಸಿ, ಕು। ಚಿತ್ರ, ನಿರೂಪಿಸಿ, ಶ್ರೀ ರತನ್ ಧನ್ಯವಾದಗೈದರು.

## ಪ್ರೌಢಶಾಲಾ ವಿಭಾಗ

**ಗುರುವಂದನ :**

ಜೀವನ ಒಂದು ಗುರಿಯನ್ನು ಹೊಂದಿರಬೇಕು. ಅದಕ್ಕಾಗಿ ಕನಸು ಕಾಣಬೇಕು. ಕನಸು ಕಾಣುತ್ತಾ ಇದ್ದರೆ ಇಚ್ಛಾ ಶಕ್ತಿ ಬೆಳೆಯುತ್ತದೆ. ಎಂದು ಶ್ರೀಯುತ ಈಶ್ವರ ಭಟ್ ಮಧುಕರ ಸಭಾಂಗಣದಲ್ಲಿ ದಿನಾಂಕ 02.07.2012ರಂದು ನಡೆದ ಸಾಮೂಹಿಕ ಹುಟ್ಟುಹಬ್ಬ, ಭಜನಾ ಕಾರ್ಯಕ್ರಮ ಮತ್ತು ಗುರುವಂದನಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಆಶೀರ್ವಾದ ನೀಡಿದರು. ಶ್ರೀಮತಿ ಪರಮೇಶ್ವರಿ ಈಶ್ವರ ಭಟ್ ಮಾತನಾಡಿ "ಶಾಲೆಯ ಶಿಕ್ಷಕನಾದವನು



ಆದರ್ಶನಾಗಿರಬೇಕು ಮೌಲ್ಯಗಳನ್ನು ಒಡಗೂಡಿಸಿ ಮಕ್ಕಳಿಗೆ ಆದನ್ನು ತಿಳಿಹೇಳಬೇಕು ಎಂದರು. ಗುರುವಂದನೆಯ ಪರಿಚಯವನ್ನು ಶ್ರೀ ವಿನೋದ್ ಶೆಟ್ಟಿ ತಿಳಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ ವಸಂತಮಾಧವ, ಈಶ್ವರ ಭಟ್ ದಂಪತಿಗಳಿಗೆ ಗುರುಕಾಣಿಕೆ ನೀಡಿದರು. ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಹಿರಿಯರಿಂದ ತಿಲಕಧಾರಣೆ ಮಾಡಿಸಿಕೊಳ್ಳುವ ಮೂಲಕ ಸಾಮೂಹಿಕ ಹುಟ್ಟುಹಬ್ಬವನ್ನು ಹಾಗೂ



ಗುರುವಂದನೆಯನ್ನು ಆಚರಿಸಲಾಯಿತು. ವೇದಿಕೆಯಲ್ಲಿ ಶ್ರೀಮತಿ ಜ್ಯೋತಿ ನಾಯಕ್ ಉಪಸ್ಥಿತರಿದ್ದರು.

ಅಶ್ವಿನಿ ಸ್ವಾಗತಿಸಿ, ಯಜ್ಞೇಶ್ ವಂದಿಸಿ, ಸತ್ಯಶ್ಯಾಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಅಚ್ಯುತದಾಸರ ಶಿಷ್ಯರಾದ ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರದ ಶ್ರೀ ಈಶ್ವರದಾಸರಿಂದ ಹರಿಕಾಥಾ ಕಾಲಕ್ಷೇಪ ನಡೆಯಿತು.

**ವಿವಿಧ ಸಂಘಗಳ ಉದ್ಘಾಟನೆ :**




ಶ್ರೀರಾಮ ಪ್ರೌಢಶಾಲಾ ವಿದ್ಯಾರ್ಥಿಗಳ ಸಹಪಠ್ಯ ಚಟುವಟಿಕೆಗಳಿಗಾಗಿ ರಚಿಸಲಾದ 19 ವಿವಿಧ ಸಂಘಗಳನ್ನು ಶ್ರೀರಾಮ ಪ್ರಾಥಮಿಕ ಶಾಲಾಭಿವೃದ್ಧಿ ಅಧ್ಯಕ್ಷರಾದ, ಶ್ರೀ ಸತೀಶ್ ಶಿವಗಿರಿ ಇವರು ಉದ್ಘಾಟಿಸಿದರು. ಅವರು "ಸಂಘ ಎಂದರೆ ಒಗ್ಗಟ್ಟು, ಮುಂದಿನ ಜೀವನಕ್ಕೆ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದರೆ ವಿದ್ಯಾರ್ಥಿ ದೆಸೆಯಿಂದಲೇ ವಿವಿಧ ಸಂಘ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು" ಎಂದು ಹೇಳಿದರು. ಅತಿಥಿಯಾದ ಮಣಿಕಂಠ ಮಾತೃಶಕ್ತಿಯ ಅಧ್ಯಕ್ಷೆ ಪ್ರೇಮ ನಾರಾಯಣ ಇವರು ವಿದ್ಯಾರ್ಥಿಗಳಾಗಿ ನನ್ನ ಏಳಿಗೆಗೆ ನಾನು ಏನು ಮಾಡಬೇಕು? ನಮ್ಮ ಭವಿಷ್ಯವನ್ನು ನಾವು ಹೇಗೆ ರೂಪಿಸಿಕೊಳ್ಳಲು ಸಾಧ್ಯ? ಎಂಬ ಚಿಂತನೆ ನಮ್ಮನ್ನು ಬೆಳೆಸುತ್ತದೆ ಎಂದರು. 8 ನೇ ತರಗತಿಯ ದೇವಿಪ್ರಸಾದ್ (ನರೇಂದ್ರ). ರಘವೀರ (ಕಣ್ಣಗಿ), ಇವರು ವಿವೇಕಾನಂದರ 150ನೇ ವರ್ಷಾಚರಣೆಯ ಸಲುವಾಗಿ ವಿವೇಕಾನಂದರ ಬಾಲ್ಯ ಘಟನೆಗಳನ್ನು ವಿವರಿಸಿದರು. ವಿವಿಧ ಸಂಘಗಳ ಉದ್ಘಾಟನೆಯ ಮೊದಲು ಜುಲೈ ತಿಂಗಳಲ್ಲಿ ಹುಟ್ಟಿದ ವಿದ್ಯಾರ್ಥಿಗಳ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮವನ್ನು ಸಾಂಪ್ರದಾಯಿಕವಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ, ಮುಖ್ಯ ಅತಿಥಿಗಳಾದ ಪ್ರೇಮ ನಾರಾಯಣ ಇವರಿಂದ ತಿಲಕಧಾರಣೆ ಮಾಡಿಕೊಂಡು ಆಶೀರ್ವಾದ ಪಡೆದು–ಕೊಂಡರು. ವಾಸವಿ ಬಳ್ಳುಕ್ಕುರಾಯ (9 ನಿವೇದಿತಾ) ಸ್ವಾಗತಿಸಿ, ವಿನೀತ್ (8 ಕಣ್ಣಗಿ) ವಂದನಾರ್ಪಣೆಗೈದು, ಚೈತ್ರ (9 ಚೆನ್ನಮ್ಮ) ನಿರೂಪಿಸಿದರು.

# ಪದವಿಪೂರ್ವ ವಿಭಾಗ



## ಭಾವನಾ–ಸಾಂಸ್ಕೃತಿಕ ಸಂಘ

2012–13ನೇ ಶೈಕ್ಷಣಿಕ ವರ್ಷದ ಪ್ರಥಮ ಸಾಂಸ್ಕೃತಿಕ ವೈವಿಧ್ಯ 09–07–2012ರಂದು ಅಜಿತ ಕುಮಾರ ಸಭಾಭವನದಲ್ಲಿ ಜರುಗಿತು. ಶ್ರೀರಾಮ ಪ.ಪೂ.ಕಾಲೇಜು ಇಲ್ಲಿನ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಕಾಲೇಜಿನ ಭಾವನಾ ಸಾಂಸ್ಕೃತಿಕ ಸಂಘವು ವಿವಿಧ ಕಾರ್ಯಕ್ರಮಗಳನ್ನು ನಿಯೋಜಿಸುತ್ತಾ ಬಂದಿದೆ. ಅದರಂತೆ ಜುಲೈ ತಿಂಗಳಲ್ಲಿ ದ್ವಿತೀಯ ವಾಣಿಜ್ಯ (ಬಿ) ಮತ್ತು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ವಿವಿಧ ಪ್ರಕಾರಗಳ ನೃತ್ಯ, ಸಮೂಹ ಗಾಯನ, ಪ್ರಹಸನ, ಕೋಲಾಟ ಇತ್ಯಾದಿಗಳನ್ನು ಪ್ರತ್ಯೇಕ ದಿನಗಳಂದು ಅಜಿತಕುಮಾರ ಸಭಾಭವನದಲ್ಲಿ ನಡೆಸಿಕೊಟ್ಟರು.

## ಜಿಲ್ಲಾಮಟ್ಟದ ಪುಟ್ಬಾಲ್ ಪಂದ್ಯಾಟ :

ವಿದ್ಯಾಭಾರತಿ ಕರ್ನಾಟಕ ಇದರ ವತಿಯಿಂದ ನಡೆದ ಜಿಲ್ಲಾ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ಕಾಲ್ಚೆಂಡು ಪಂದ್ಯವನ್ನು ಶ್ರೀರಾಮ ಪ.ಪೂ.ಕಾಲೇಜು ಕಲ್ಲಡ್ಕ ಆಯೋಜಿಸಿದ್ದು, ಪಂದ್ಯಗಳನ್ನು ವಿವೇಕಾನಂದ ಪ. ಪೂ. ಕ್ರೀಡಾಂಗಣದಲ್ಲಿ ನಡೆಸಲಾಯಿತು. ವಿದ್ಯಾಭಾರತಿ ದ. ಕ. ಜಿ. ಶಾರೀರಿಕ ಪ್ರಮುಖರಾದ ಶ್ರೀ ಚಂದ್ರರಾಜ ಜೈನ್ ಇವರು ಪಂದ್ಯಾಟವನ್ನು ಉದ್ಘಾಟಿಸಿ ಕ್ರೀಡಾಳುಗಳಿಗೆ ಶುಭ ಹಾರೈಸಿದರು.



ಈ ಸಂದರ್ಭದಲ್ಲಿ ಶ್ರೀರಾಮ ಕಾಲೇಜಿನ ಉಪಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್, ದೈಹಿಕ ನಿರ್ದೇಶಕರಾದ ಶ್ರೀ ಕರುಣಾಕರ ಇವರು ಉಪಸ್ಥಿತರಿದ್ದರು. ತರುಣ ವರ್ಗದ ವಿದ್ಯಾರ್ಥಿಗಳಿಗೆ ನಡೆದ ಪಂದ್ಯಾಟದಲ್ಲಿ ಶ್ರೀರಾಮ ಪ.ಪೂ.ವಿದ್ಯಾಲಯ ದ್ವಿತೀಯ, ಬಾಲವರ್ಗದಲ್ಲಿ ಶ್ರೀರಾಮ ಪ್ರಾಥಮಿಕ ಶಾಲೆ ಕಲ್ಲಡ್ಕ ದ್ವಿತೀಯ ಸ್ಥಾನ ಗಳಿಸಿತು. ಸಾಯಂಕಾಲ ಶ್ರೀರಾಮ ಪ.ಪೂ.ಕಾಲೇಜಿನ ಪ್ರಾಚಾರ್ಯರಾದ ಶ್ರೀ ಕೃಷ್ಣಪ್ರಸಾದ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ವಿವೇಕಾನಂದ ಪದವಿ ವಿಭಾಗದ ದೈಹಿಕ ನಿರ್ದೇಶಕರಾದ ಶ್ರೀ ರವಿಶಂಕರ್, ಸರಸ್ವತಿ ವಿದ್ಯಾಲಯ ಕಡಬ ಇಲ್ಲಿನ ಸಂಚಾಲಕರಾದ ಶ್ರೀ ವೆಂಕಟರಮಣ ಇವರು ಉಪಸ್ಥಿತರಿದ್ದರು. ಶ್ರೀ ಕರುಣಾಕರ ಕಾರ್ಯಕ್ರಮ ನಿರೂಪಿಸಿದರು.

## ಯೋಗಾಸಾನ ರಾಜ್ಯಮಟ್ಟಕ್ಕೆ ಆಯ್ಕೆ

ವಿದ್ಯಾಭಾರತಿ ಕರ್ನಾಟಕ ಇದರ ವತಿಯಿಂದ ದಿನಾಂಕ 05–07–2012 ರಂದು ಮಂಗಳೂರು ಶಾರದಾ ವಿದ್ಯಾಲಯದಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದ ಯೋಗಾಸನ ಸ್ಪರ್ಧೆಯಲ್ಲಿ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ಪ್ರಥಮ ವಿಜ್ಞಾನ ವಿಭಾಗದ ಅಭಿಲಾಶ್ ಕುಮಾರ್ ಆಳ್ವ ಇವರು ದ್ವಿತೀಯ ಹಾಗೂ ಶ್ರೀ ಗಣೇಶ್ ಪಿ. ತೃತೀಯ ಸ್ಥಾನ ಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

## ಚೆಸ್ ರಾಜ್ಯಮಟ್ಟಕ್ಕೆ ಆಯ್ಕೆ

ದಿನಾಂಕ 07–07–2012 ರಂದು ಶುಭೋದಯ ವಸತಿ ಶಾಲೆ ಮೂಡುಶೆಡ್ಡೆ ಇಲ್ಲಿ ವಿದ್ಯಾಭಾರತಿ ಕರ್ನಾಟಕದ ವತಿಯಿಂದ ನಡೆದ ಜಿಲ್ಲಾ ಮಟ್ಟದ ಚೆಸ್ ಪಂದ್ಯದಲ್ಲಿ ಶ್ರೀರಾಮ ಪದವಿ ಪೂರ್ವ ಕಾಲೇಜಿನ ರೇಖಾ (ಪ್ರಥಮ ಕಲಾ ವಿಭಾಗ) ಇವರು ತೃತೀಯ ಸ್ಥಾನ ಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

## ಸಾಹಸಿಗರ ಸಂಘ

ಶ್ರೀರಾಮ ಪದವಿ ಪೂರ್ವ ವಿದ್ಯಾಲಯದಲ್ಲಿ ದಿನಾಂಕ 28–07–2012 ರಂದು ಭಗೀರಥ ಸಾಹಸಿಗರ ಸಂಘದ ವತಿಯಿಂದ ಆವರಣದ ಸುತ್ತ ಸ್ವಚ್ಛತೆ ಮತ್ತು ಶಾಲಾ ಸಂಬಂಧಿ ವಸ್ತುಗಳನ್ನು ವ್ಯವಸ್ಥಿತವಾಗಿ ಜೋಡಿಸಿಡುವ ಕಾರ್ಯವನ್ನು ನಡೆಸಲಾಯಿತು. ಸಂಘದ ನಿರ್ದೇಶಕರಾದ ಶ್ರೀ ಗಿರೀಶ್ ರವರ ನೇತೃತ್ವದಲ್ಲಿ ಒಟ್ಟು 22 ವಿದ್ಯಾರ್ಥಿಗಳು ಈ ಕಾರ್ಯದಲ್ಲಿ ಭಾಗಿಯಾಗಿದ್ದರು.

## ವಿಜ್ಞಾನ ಸಂಘ



ಶ್ರೀರಾಮ ಪದವಿ ಪೂರ್ವ ವಿದ್ಯಾಲಯ ಇಲ್ಲಿ ದಿನಾಂಕ 28–07–2012 ರ ಶನಿವಾರ ಭಾಸ್ಕರಾಚಾರ್ಯ ವಿಜ್ಞಾನ ಸಂಘದ ವತಿಯಿಂದ ರಸಪ್ರಶ್ನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿವಿಧ ತರಗತಿಯ ಒಟ್ಟು 18ತಂಡ ಇದರಲ್ಲಿ ಭಾಗವಹಿಸಿದ್ದು ಅಂತಿಮ ಹಂತಕ್ಕೆ 4 ತಂಡವನ್ನು ಆಯ್ಕೆ ಮಾಡಿ ಸ್ಪರ್ಧೆಯನ್ನು ನಡೆಸಲಾಯಿತು. ಸಾಮಾನ್ಯ ಜ್ಞಾನ, ಮಾನಸಿಕ ಸಾಮರ್ಥ್ಯ, ಆಡಿಯೋ– ವಿಸುವಲ್ ಹೀಗೆ ವಿವಿಧ ಸುತ್ತುಗಳನ್ನೊಳಗೊಂಡ ಈ ಸ್ಪರ್ಧೆಯಲ್ಲಿ ಅಂತಿಮವಾಗಿ ದ್ವಿತೀಯ ವಾಣಿಜ್ಯ (ಬಿ) ವಿಭಾಗದ ರಾಜ್‌ಗೋಪಾಲ್ ಮತ್ತು ಕಿರಣ್‌ಕುಮಾರ್ ಪ್ರಥಮ, ದ್ವಿತೀಯ ವಿಜ್ಞಾನ ವಿಭಾಗದ ದೀಪಕ್ ಮತ್ತು ಅಭಿಷೇಕ್ ಆಚಾರ್ಯ ಇವರು ದ್ವಿತೀಯ ಸ್ಥಾನಿಗಳಾದರು. ಸಂಘದ ನಿರ್ದೇಶಕಿ ಅಮೃತ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಜಯಲಕ್ಷ್ಮಿ ಮತ್ತು ಸುಧಾ ಸಹಕರಿಸಿದರು. ಸಂಘದ ಎಲ್ಲಾ ಸದಸ್ಯರುಗಳು ಉಪಸ್ಥಿತರಿದ್ದರು.

### ಪ್ರತಿಭಾರಾಮ ಸಾಹಿತ್ಯ ಸಂಘ (ಚಿತ್ರಕಲಾ ಕಾರ್ಯಗಾರ)

ಶ್ರೀರಾಮ ಪದವಿ ಪೂರ್ವ ವಿದ್ಯಾಲಯ ಇಲ್ಲಿ ದಿನಾಂಕ 28-07-2012 ನೇ ಶನಿವಾರದಂದು ಪ್ರತಿಭಾರಾಮ ಸಾಹಿತ್ಯ ಸಂಘದ ಆಶ್ರಯದಲ್ಲಿ ಚಿತ್ರಕಲಾ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರವನ್ನು ಮಹಾಲಸಾ ಚಿತ್ರಕಲಾ ಶಾಲೆ ಮಂಗಳೂರು ಇಲ್ಲಿನ ಚಿತ್ರ ಕಲಾವಿದರಾದ ಅರುಣ್ ಕುಮಾರ್ ನೆಟ್ಲ ಎ Point Interactive ಮಂಗಳೂರು ಇಲ್ಲಿನ ವಿನ್ಯಾಸಕರಾದ ಜಯರಾಮ ನಾವಡ ನೆಟ್ಲ ಮತ್ತು ಶಿವಾನಂದ ಕಕ್ಕೆಪದವು ಇವರು ನಡೆಸಿಕೊಟ್ಟರು. ಕಾರ್ಯಾಗಾರದಲ್ಲಿ ರೇಖಾ ಚಿತ್ರ, ವ್ಯಂಗ್ಯ ಚಿತ್ರ ಹೀಗೆ ವಿವಿಧ ಪ್ರಕಾರಗಳ ಚಿತ್ರಗಳನ್ನು ಬಿಡಿಸುವುದರ ಬಗ್ಗೆ ಮಾರ್ಗದರ್ಶನ ನೀಡಿದರು. ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ವಿಭಾಗಗಳ ಸುಮಾರು 60 ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡರು. ಸಂಘದ ಸಹಕಾರ್ಯದರ್ಶಿಯಾದ ಚಿತ್ರಾಕ್ಷಿ ಇವರು ಸ್ವಾಗತಿಸಿ, ಕಾರ್ಯದರ್ಶಿ ವಿಜೇಶ್ ವಂದಿಸಿದರು. ಸಂಘದ ನಿರ್ದೇಶಕರಾದ ಶ್ರೀ ಮಹೇಶ್ ನೆಟ್ಲ ಹಾಗೂ ಉಪನ್ಯಾಸಕಿ ಶಶಿಕಲಾ ಇವರು ಉಪಸ್ಥಿತರಿದ್ದರು.



### ಭಜನಾ ಕಾರ್ಯಕ್ರಮ

ಭಾವನಾ ಸಾಂಸ್ಕೃತಿಕ ಸಂಘದ ವತಿಯಿಂದ ಪ್ರತಿ ತಿಂಗಳು ನಡೆಸಲ್ಪಡುವ ಭಜನಾ ಕಾರ್ಯಕ್ರಮವನ್ನು 31-7-2012ರಂದು ದ್ವಿತೀಯ ವಾಣಿಜ್ಯ (ಎ) ವಿಭಾಗದ ವಿದ್ಯಾರ್ಥಿ ವಿದ್ಯಾರ್ಥಿನಿಯರು ನಡೆಸಿಕೊಟ್ಟರು. ಕಾರ್ಯಕ್ರಮದ ಕೊನೆಯಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಅಭಿನಂದಿಸಲಾಯಿತು.

## ಪದವಿ ವಿಭಾಗ

### ಗುರುವಂದನಾ ಕಾರ್ಯಕ್ರಮ:



ಶ್ರೀರಾಮ ಕಾಲೇಜು ಕಲ್ಲಡ್ಕ ಇದರ ಅಜಿತ ಕುಮಾರ ಸಭಾ ಭವನದಲ್ಲಿ ದಿನಾಂಕ 04.07.2012ರಂದು ಗುರುವಂದನಾ ಕಾರ್ಯಕ್ರಮ ಜರಗಿತು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಂಗಳೂರು ವಿಭಾಗ ವ್ಯವಸ್ಥಾ ಪ್ರಮುಖರಾದ ಶ್ರೀಯುತ ಅಚ್ಯುತ ನಾಯಕ್ ಮಾತನಾಡಿ "ಗುರು ಪರಂಪರೆ ಹಿಂದಿನಿಂದ ಬಂದದ್ದು, ಯಾರು ಅಂಧಕಾರ, ಅಜ್ಞಾನವನ್ನು ಹೋಗಲಾಡಿಸಿ ಒಳ್ಳೆಯ ವಿಚಾರ ಬಿತ್ತುತ್ತಾನೋ ಅವನೇ ಗುರು" ಎಂದರು. ನಿವೃತ್ತ ಪ್ರಾಧ್ಯಾಕರಾದ ಬೆಳ್ತಂಗಡಿ ಕರಾಯ ನಿವಾಸಿ ಗೋವಿಂದ ಭಟ್ ಮಾತನಾಡಿ "ದೈವೀಗುಣವನ್ನು ಬೆಳೆಸಿ, ತನ್ನನ್ನು ತಾನು ರಕ್ಷಿಸಿಕೊಳ್ಳಲು ತಮಸ್ಸನ್ನು ಹೊಡೆದೋಡಿಸುವ ಶಕ್ತಿಯನ್ನು ಉದ್ದೀಪನಗೊಳಿಸುವನೇ ಗುರು" ಎಂದರು.

ಈ ಸಂದರ್ಭದಲ್ಲಿ ಶ್ರೀಯುತ ಗೋವಿಂದ ಭಟ್ ಇವರಿಗೆ ಗುರುವಂದನೆಯನ್ನು ಸಲ್ಲಿಸಲಾಯಿತು.

ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಯುತ ಗೋಪಾಲ ಶೆಣೈ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪ್ರಾಂಶುಪಾಲರಾದ ಕೃಷ್ಣಪ್ರಸಾದ ಸ್ವಾಗತಿಸಿ, ಜಾಕೇಶ್ ಧನ್ಯವಾದಗೈದು ಪ್ರಣೀತಾ ವಂದಿಸಿದರು.




### ಸಾಂಸ್ಕೃತಿಕ ಕಾರ್ಯಕ್ರಮ:

2012-13ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಸಂಘದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೊದಲನೆಯ ಸಾಂಸ್ಕೃತಿಕ ವೈವಿದ್ಯ ದಿನಾಂಕ 9-07-2012ರಂದು ಕಾಲೇಜಿನ ಸಭಾಂಗಣದಲ್ಲಿ ಜರಗಿತು.

### ನಾಗರ ಪಂಚಮಿ ಉತ್ಸವ – ವಸತಿ ನಿಲಯ

23-07-2012ನೇ ಸೋಮವಾರ ನಾಗರಪಂಚಮಿ ಪ್ರಯುಕ್ತ ವಿದ್ಯಾಕೇಂದ್ರದ ಪಕ್ಕದಲ್ಲಿರುವ ನಾಗಬನದಲ್ಲಿ ವಿಶೇಷ ಪೂಜೆಗಳು ಜರುಗಿದವು. ವಿದ್ಯಾಸಂಸ್ಥೆಯ ವಸತಿ ನಿಲಯ ವಿಭಾಗದ 185ಕ್ಕೂ ಹೆಚ್ಚು ವಿದ್ಯಾರ್ಥಿಗಳು, ವಸತಿ ಪಾಲಕರು ಸಂಸ್ಥೆಯ ಹಿರಿಯರೊಂದಿಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅದೇ ದಿನ ಸಂಜೆ ನಾಗರಪಂಚಮಿಯ ಮಹತ್ವದ ಬಗೆಗೆ ಶ್ರೀ ಕಶೆಕೋಡಿ ಸೂರ್ಯನಾರಾಯಣ ಭಟ್ ಇವರಿಂದ ವಸತಿ ನಿಲಯ ವಿಭಾಗದಲ್ಲಿ ವಿಶೇಷ ಉಪನ್ಯಾಸವು ಜರುಗಿತು.




- ಹಣ, ಕೀರ್ತಿ, ಹೆಸರು, ಪಾಂಡಿತ್ಯ ಇವೆಲ್ಲಾ ಗೌಣ. ಶೀಲ ಮಾತ್ರ ಕಷ್ಟಗಳ ಬಲವಾದ ಗೋಡೆಗಳನ್ನು ಭೇದಿಸಿ ಮುನ್ನುಗ್ಗಬಲ್ಲದು.
- ಎಲ್ಲಾ ಸಾಮರ್ಥ್ಯವೂ ನಿಮ್ಮಲ್ಲೇ ಇದೆ. ನೀವು ಏನನ್ನೂ ಮತ್ತು ಎಲ್ಲವನ್ನೂ ಸಾಧಿಸಬಹುದು. ಇದನ್ನು ನಂಬಿ. ನೀವು ದುರ್ಬಲರೆಂದು ತಿಳಿಯಬೇಡಿ. ಎದ್ದುನಿಂತು ನಿಮ್ಮಲ್ಲಿರುವ ದೈವತ್ವವನ್ನು ವ್ಯಕ್ತಗೊಳಿಸಿ.
- ಜೀವನದ ಯಾವುದೇ ಕಾರ್ಯಕ್ಷೇತ್ರದಲ್ಲಿ ಯಶಸ್ಸಾಗುವುದು ಏಕಾಗ್ರತೆಯ ಕಾರಣಕ್ಕಾಗಿ ಮಾತ್ರ.
- ನಮಗೆ ಇಂದು ಬೇಕಾಗಿರುವುದು ವೇದಾಂತದೊಡನೆ ಮಿಳಿತಗೊಂಡಿರುವ ವಿಜ್ಞಾನ, ಚಾಲಕ ಶಕ್ತಿಯಾಗಿ ಬ್ರಹ್ಮಚರ್ಯ ಮತ್ತು ನಮ್ಮ ಆತ್ಮದ ಬಗ್ಗೆ ದೃಢವಾದ ಶ್ರದ್ಧೆ ಮತ್ತು ನಂಬಿಕೆ.
- ನಿಮಗೆ ಬೇಕಾದ ಶಕ್ತಿ ಮತ್ತು ಸ್ಫೂರ್ತಿ ನಿಮ್ಮಲ್ಲಿಯೇ ಇದೆ. ಆದ್ದರಿಂದ ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿ.



## ಚಿತ್ರ ನೋಡಿ ಶೀರ್ಷಿಕೆ ನೀಡಿ

**ಹಿಂದಿನ ಸಂಚಿಕೆಯ ಚಿತ್ರಕ್ಕೆ ಆಯ್ಕೆಯಾದ ಶೀರ್ಷಿಕೆಗಳು :**

1. **ಅಕ್ಕರೆಯ ಕಂದಮ್ಮನಿಗೆ ಸಕ್ಕರೆಯ ಗುಟುಕು**
(ಶ್ಯಾಮ್ ಪ್ರಸಾದ್ ಎಮ್.ಜಿ. I ಪಿಯುಸಿ, ವಾಣಿಜ್ಯ)
2. ಅಮ್ಮನ ಕರುಣೆಯ ಈ ತುತ್ತು ; ಇದು ನನ್ನ ಪಾಲಿನ ಸಂಪತ್ತು.
(ಸುಮನಾ ಭಟ್, 9ನೇ ಭಾಸ್ಕರ)
3. ಕಂದಾ ನಿನಗಾಗಿ ತಂದಿರುವೆ. ಇದೋ ಅವಸರವೇಕೆ ? ಹಸಿವೆಯಲಿ ಚಡಪಡಿಸದಿರು ಅಯ್ಯೋ ಬಿದ್ದೀಯೇ ಜೋಕೆ. (ಕಲಾಪ್ರಿಯ,ಕಲ್ಲಡ್ಕ)
4. ಅಮ್ಮಾ ನಿನ್ನ ಒಂದು ತುತ್ತು ನನ್ನ ಜೀವಕೆ ರಕ್ಷಾ ಮುತ್ತು.
(ದೀಪಿಕಾ ಪಿ. ಎಮ್.ಜಿ. II ಪಿಯುಸಿ, ವಾಣಿಜ್ಯ)




ಈ ಚಿತ್ರಕ್ಕೆ ಶೀರ್ಷಿಕೆಯನ್ನು ಕಳುಹಿಸಿಕೊಡಿ.
ವಿದ್ಯಾರ್ಥಿಗಳು ಆಯಾ ವಿಭಾಗದಲ್ಲಿ ಇಟ್ಟಿರುವ ಸರಯೂ ಪೆಟ್ಟಿಗೆಯಲ್ಲಿ ಉತ್ತರಗಳನ್ನು ಬರೆದುಹಾಕಿ.

**ಮುಖಪುಟ ಸುದ್ದಿ**

# ಎಳೆಮಕ್ಕಳೊಳು ತಿಳಿವು ಮೊಳೆತುಬೆಳೆವುದು ನೋಡು

**ಎಳೆಯ ತರು ದಿನದಿನವೂ ಹೊಸ ತಳಿರ ತಳೆವಂತೆ**
**ತಿಳಿನೀರು ಚಿಲುಮೆಯಲಿ ನಿಲದುಕ್ಕುವಂತೆ**
**ಎಳೆಮಕ್ಕಳೊಳು ತಿಳಿವು ಮೊಳೆತು ಬೆಳೆವುದು ನೋಡು**
**ಇಳೆಯೊಳದೊಂದು ಸೊಗ – ಮಂಕುತಿಮ್ಮ ||**

ಎಳೆಯಗಿಡ ಬೆಳೆದು ಹೊಸಚಿಗುರಿನಿಂದ ನಳನಳಿಸುವಂತೆ, ತಿಳಿಯಾದ ನೀರು ಚಿಲುಮೆಯಲಿ ಸತತವಾಗಿ ಉಕ್ಕುವಂತೆ, ಎಳೆಯ ಮಕ್ಕಳ ತಿಳಿವು ಅಂಕುರಿಸಿ, ಬೆಳೆಯುತ್ತಲೇ ಇರುತ್ತವೆ. ಭೂಮಿಯೊಳಗೆ ಇದೊಂದು ಸುಂದರವಾದ ಪ್ರಕ್ರಿಯೆ.

### ಶಾಲಾವನ ಮತ್ತು ಭತ್ತದ ಗದ್ದೆ ಕೃಷಿ

ಶಾಲಾವನದಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಪ್ರಾಥಮಿಕ, ಪ್ರೌಢಶಾಲಾ ಪರಿಸರ ಸಂಘದ ಎಲ್ಲಾ ವಿದ್ಯಾರ್ಥಿಗಳು ಪಾಲ್ಗೊಂಡರು. ವಿದ್ಯಾ-ಕೇಂದ್ರದ ಸಂಚಾಲಕರಾದ ಡಾ। ಪ್ರಭಾಕರ ಭಟ್ ಅಶ್ವತ್ಥ ಗಿಡ ನೆಡುವುದರ ಮೂಲಕ ವನಮಹೋತ್ಸವವನ್ನು ಆಚರಿಸಿದರು. ಅಧ್ಯಕ್ಷರಾದ ನಾರಾಯಣ ಸೋಮಯಾಜಿ, ಪ್ರಾಥಮಿಕ, ಪ್ರೌಢಶಾಲಾ ಮುಖ್ಯೋಪಾಧ್ಯಾಯರು, ಕಾಲೇಜು ಪ್ರಾಂಶುಪಾಲರು ಹಾಗೂ ಶಾಲಾ ಆಡಳಿತ ಮಂಡಳಿಯ ಸದಸ್ಯರುಗಳು ಉಪಸ್ಥಿತರಿದ್ದರು.

ಗ್ರಾಮೀಣ ಬದುಕಿನ ನೈಜ ಚಿಂತನೆಯನ್ನು ಮೂಡಿಸುವ ದೃಷ್ಟಿಯಿಂದ ಆಷಾಢ ಮಾಸದ ಜಿಟಿ ಜಿಟಿ ಮಳೆಗೆ ಏಣಿಲ್ (ಪ್ರಥಮ) ಬೆಳೆಯ ಭತ್ತದ ನಾಟಿ ಕಾರ್ಯದಲ್ಲಿ ಪ್ರೌಢಶಾಲಾ ಹಾಗೂ ಪ್ರಾಥಮಿಕ ಶಾಲಾ ವಿಭಾಗದ 750 ವಿದ್ಯಾರ್ಥಿ– ವಿದ್ಯಾರ್ಥಿನಿಯರು ಉತ್ಸಾಹ ಉಲ್ಲಾಸದಿಂದ ಪಾಲ್ಗೊಂಡರು. ವಿದ್ಯಾರ್ಥಿಗಳಿಗೆ ಹಿರಿಯರು, ಶಿಕ್ಷಕ ವೃಂದ, ಊರಿನ ಅನುಭವಿ ಕೃಷಿಕರು ಕೃಷಿ ಪದ್ಧತಿಯನ್ನು ಕಲಿಸಿ ಸ್ವಾವಲಂಬನೆಯ ಜೀವನವನ್ನು ಕಟ್ಟಿಕೊಳ್ಳುವ ವಿಶ್ವಾಸ ಬೆಳೆಯುವಂತೆ ಮಾಡಿದರು.








## ಅಖಂಡ ಭಾರತ ಸಂಕಲ್ಪವಾಗಲಿ

ಅಖಂಡ ಭಾರತ ಅದೊಂದು ಕನಸಲ್ಲ. ಅದೊಂದು ಶ್ರದ್ಧೆ-ನಿಷ್ಠೆ. ಈ ದೇಶದಲ್ಲಿ ಜನರು ಭೂಮಿಯನ್ನು ತಾಯಿ ಎಂದು ಭಾವಿಸುತ್ತಾರೆ. ತನ್ನನ್ನು ತಾನು ಈ ಭೂಮಿಯ ಪುತ್ರ ಎಂದೇ ತಿಳಿದುಕೊಂಡಿದ್ದಾರೆ. ಇಂತಹ ಮಾತೃಭೂಮಿಯ ವಿಭಜನೆಯನ್ನು ಮರೆಯುವುದು ಹೇಗೆ ?

ಅಖಂಡ ಭಾರತದ ಸಂಕಲ್ಪವನ್ನು ತ್ಯಜಿಸುವುದು ಹೇಗೆ ? 1947ರ ವಿಭಜನೆ ಮೊದಲನೆಯದೂ ಅಲ್ಲ, ಕೊನೆಯದೂ ಅಲ್ಲ. ಭಾರತದ ಗಡಿಗಳು ಅದಕ್ಕಿಂತ ಮೊದಲೇ ಸಂಕುಚಿತಗೊಳ್ಳತೊಡಗಿದ್ದವು. 7ರಿಂದ 9ನೇ ಶತಮಾನದವರೆಗೆ ಸುಮಾರು 250 ವರ್ಷಗಳ ಕಾಲ ಸಂಘರ್ಷ ನಡೆದು ಹಿಂದೂ ರಾಷ್ಟ್ರದ ಭಾಗಗಳು ಪ್ರತ್ಯೇಕಗೊಳ್ಳತೊಡಗಿದ್ದವು.

1947ರ ನಂತರವೂ ಪ್ರತ್ಯೇಕತೆಯ ಮನೋಭಾವ ಕ್ಷೀಣಿಸಲಿಲ್ಲ. ತುಷ್ಟೀಕರಣದ ಮನೋಭಾವದಿಂದಾಗಿ ಕಾಶ್ಮೀರ, ಅಸ್ಸಾಮ್, ಅರುಣಾಚಲ ಪ್ರದೇಶಗಳಲ್ಲಿ ಇಂದೂ ಒಡಕಿನ ಅಪಸ್ವರ ಕೇಳುತ್ತಲೇ ಇದೆ.

ಹೀಗಿದ್ದೂ ನಾವೆಲ್ಲರೂ ಒಂದು ಸಶಕ್ತ ಏಕತೆಯ ತೇಜಸ್ವೀ ರಾಷ್ಟ್ರಜೀವನವನ್ನು ಎದ್ದು ನಿಲ್ಲಿಸಬೇಕಿದೆ. ಅದಕ್ಕಾಗಿ ಭಾರತೀಯರಲ್ಲಿ ಸಾಂಸ್ಕೃತಿಕ, ರಾಷ್ಟ್ರೀಯ ಜಾಗೃತಿ ಮೂಡಿಸುವ ಕಾರ್ಯ, ಸಂಕಲ್ಪ ಆಗಬೇಕು. ಅಖಂಡಭಾರತದ ಗುರಿಯತ್ತ ಮುನ್ನಡೆಯಬೇಕು. ಸ್ವಾತಂತ್ರ್ಯ ದಿನಾಚರಣೆ ನಮ್ಮಲ್ಲಿ ಈ ಚಿಂತನೆ ಮೂಡಿಸುವ ದಿನವಾಗಲಿ.

## ಭಾರತದ ಗೌರವಶಾಲಿ ಪರಂಪರೆ

"ಭಾರತಕ್ಕೆ 5000 ವರ್ಷಗಳಿಗೂ ಹಿಂದಿನ ಸಂಸ್ಕೃತಿ, ಪರಂಪರೆಗಳ ದಾಖಲೆಗಳಿವೆ. ವಿಶ್ವದ ಇತರ ದೇಶಗಳಗಳಿಗಿಂತಲೂ ಪುರಾತನ ಇತಿಹಾಸ ಭಾರತದ್ದಾಗಿದೆ. ರಾಮೇಶ್ವರದಲ್ಲಿರುವ 'ರಾಮಸೇತು' ಸುಮಾರು 17.5 ಲಕ್ಷ ವರ್ಷಗಳ ಹಿಂದೆ ನಿರ್ಮಾಣವಾಗಿದೆ ಎಂದು ಅಮೇರಿಕಾದ ವಿಜ್ಞಾನಿಗಳು ಘೋಷಿಸಿದ್ದು ಇದು ರಾಮಾಯಣದ ಕಾಲಕ್ಕೆ ಸರಿಸಮವಾಗಿದೆ ಎಂದು ತರ್ಕಿಸಲಾಗಿದೆ. ನಮ್ಮದು ಮಹಾನ್ ರಾಷ್ಟ್ರವೆಂದು ನಿರ್ಧರಿಸಲು ಮೂರು ಪ್ರಮುಖ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಜನಜೀವನ, ಆಕ್ರಮಣಗಳನ್ನು ಎದುರಿಸಿದ ರೀತಿ, ಜಗತ್ತಿಗೆ ನಮ್ಮ ಕೊಡುಗೆ. ಭಾರತೀಯರು ಜಗತ್ತಿಗೆ ಹೇಗೆ ಬದುಕಬೇಕೆಂದು ಕಲಿಸಿದವರು. ನಲಂದಾ, ತಕ್ಷಶಿಲಾ ವಿಶ್ವವಿದ್ಯಾಲಯಗಳು ಜಗತ್ತಿನ ವಿಶ್ವವಿದ್ಯಾಲಯವಾಗಿದ್ದು ಅನ್ಯರ ದಾಳಿಗೆ ತುತ್ತಾಗಿ ಇಲ್ಲಿರುವ ಗ್ರಂಥಗಳು 6 ತಿಂಗಳವರೆಗೆ ಉರಿದು ಭಸ್ಮವಾಯಿತು ಎಂದು ಇತಿಹಾಸ ತಿಳಿಸುತ್ತದೆ. ರಾಮಾಯಣ, ಮಹಾಭಾರತ ಈ ದೇಶದ ಜನರ ಜೀವನದರ್ಶನ. ಭಗವದ್ಗೀತೆ. ಮನೋವೈಜ್ಞಾನಿಕ ಗ್ರಂಥ. ಶ್ರೀಕೃಷ್ಣ ಮೊದಲ ಮನೋವಿಜ್ಞಾನಿ. ಶ್ರೀರಾಮ, ಶ್ರೀಕೃಷ್ಣ ಈ ದೇಶದ ಸಂಸ್ಕೃತಿಯ ಮಹಾನ್‌ಪುರುಷರು. ಅಂದಿನಿಂದ ನಮ್ಮ ಭಾರತೀಯ ಪರಂಪರೆ ಬೆಳೆದು ಬಂದಿದೆ. ಚಂದ್ರಗುಪ್ತನ ಸಾಮ್ರಾಜ್ಯ, ವಿಜಯನಗರ ಸಾಮ್ರಾಜ್ಯ ಈ ದೇಶ ಶ್ರೀಮಂತವಾಗಿತ್ತು ಎಂಬುದಕ್ಕೆ ನಿದರ್ಶನ. ಇಲ್ಲಿನ ಸಂಪತ್ತನ್ನು ವಿದೇಶಿರಾಜರು ಕೊಳ್ಳೆ ಹೊಡೆದರು. ಗ್ರೀಕರು, ಹೂಣರು, ಶಕರು, ಮುಸಲ್ಮಾನರು ಹಾಗೂ ಕ್ರೈಸ್ತರ ದಾಳಿಗೆ ಜಗತ್ತಿನ ಇತರ ಸಂಸ್ಕೃತಿಗಳು ನಾಶವಾಗಿದ್ದರೂ ಭಾರತೀಯ ಸಂಸ್ಕೃತಿ ನಿರಂತರತೆಯನ್ನು ಕಾಪಾಡಿಕೊಂಡು ಬಂದಿದೆ. ಆಕ್ರಮಣ, ದುರಾಚಾರ, ದೌರ್ಜನ್ಯಗಳ ಮಧ್ಯೆಯೇ ಚಾಣಕ್ಯ-ಚಂದ್ರಗುಪ್ತರಿಂದ ಮಗಧ ಸಾಮ್ರಾಜ್ಯ, ಸಮರ್ಥ ರಾಮದಾಸ- ಶಿವಾಜಿ ಮಹಾರಾಜರಿಂದ ಹಿಂದು ಸಾಮ್ರಾಜ್ಯ, ವಿದ್ಯಾರಣ್ಯ, ಹಕ್ಕಬುಕ್ಕ, ಶ್ರೀಕೃಷ್ಣ ದೇವರಾಯರಿಂದ ವಿಜಯನಗರ ಸಾಮ್ರಾಜ್ಯ ಉದಿಸಿ ಬಂತು. ಈ ನೆಲದ ಸಂಸ್ಕೃತಿಯನ್ನು ಪರಂಪರೆಯನ್ನು ಎತ್ತಿ ಹಿಡಿಯಿತು. ಭಾರತೀಯರು ಈಗಲೂ ಜಗತ್ತಿನಲ್ಲಿ ಮುಂದು. ಕ್ರಿಕೆಟ್‌ನಲ್ಲಿ ಸಚಿನ್ ತೆಂಡೂಲ್ಕರ್, ಚದುರಂಗದಲ್ಲಿ ವಿಶ್ವನಾಥನ್ ಆನಂದ್ ಹೀಗೆ ಅನೇಕ ಸಾಧಕರು ಭಾರತೀಯರೇ. ಚಂದ್ರನಲ್ಲಿ ನೀರಿನಂಶ ಇದೆ ಎಂದು ತೋರಿಸಿಕೊಟ್ಟವರು ಭಾರತೀಯ ವಿಜ್ಞಾನಿಗಳು. ಇತ್ತೀಚೆಗೆ ವಿಜ್ಞಾನಿಗಳು ಕಂಡುಹಿಡಿದ ದೇವಕಣದ ಬಗ್ಗೆ ಸತ್ಯೇಂದ್ರನಾಥ ಬೋಸ್ ತಿಳಿಸಿದ್ದರು. ವೇದಗಳಲ್ಲಿ ಈ ಬಗ್ಗೆ ಮುಂಚೆಯೇ ತಿಳಿಸಿದೆ. ಇಡೀ ಬ್ರಹ್ಮಾಂಡದ ಬಗ್ಗೆ ತಿಳಿಸಿದವರು ಭಾರತೀಯರು. ಇಲ್ಲಿನ ಜ್ಯೋತಿಷ್ಯ ಶಾಸ್ತ್ರ ಯಾವುದೇ ವಿಜ್ಞಾನಕ್ಕೂ ಕಡಿಮೆಯಿಲ್ಲ. 13 ವರ್ಷಗಳ ವಿದ್ಯಾರ್ಥಿಗಳಿಗೆ ಅಮೇರಿಕಾದಲ್ಲಿ ನಡೆಯುತ್ತಿರುವ ಸ್ಪೆಲ್ಲಿಂಗ್ ಬಿ ಸ್ಪರ್ಧೆಯಲ್ಲಿ ಭಾರತೀಯ ಮೂಲದವರೇ ಪ್ರಥಮ ಸ್ಥಾನಿಗಳು. ಭೂಮಿ ಗೋಳಾಕಾರವಾಗಿದೆ. ಸೌರಕೇಂದ್ರಿತ ಸಿದ್ಧಾಂತಗಳನ್ನು ಪ್ರಚಾರ ಪಡಿಸಿದವರೇ ಭಾರತೀಯರು. ಬೋಧಾಯನ ಸೂತ್ರ,ಆರ್ಯಭಟನಂತಹ ಗಣಿತಜ್ಞರು ನಮ್ಮವರೇ. ಚರಕ, ಸುಶ್ರುತರು ವೈದ್ಯಕೀಯ ಲೋಕಕ್ಕೆ ಕೊಡುಗೆ ನೀಡಿದವರು. ಈ ದೇಶದ ಆಧ್ಯಾತ್ಮಿಕ ಸಂಪತ್ತು ನಾಶವಾಗದ ಸಂಪತ್ತು. ಜಗತ್ತಿನ ಬೇರೆ ಯಾವ ದೇಶದಲ್ಲಿಯೂ ಇಲ್ಲ. ಇದು ದೇವ ದೇವತೆಗಳು ಜನಿಸಿದ ಪುಣ್ಯಭೂಮಿ. ಇಲ್ಲಿನ ಯೋಗ ಜಗತ್ಪ್ರಸಿದ್ಧವಾಗಿದೆ. ಸಂಸ್ಕೃತ ಭಾಷೆ ಜಗತ್ತಿನ ಶ್ರೇಷ್ಠ ಭಾಷೆ. ಸ್ವಾಮಿ ವಿವೇಕಾನಂದರ ಜೀವನ ಅವರ ಚಿಂತನೆಗಳು ನಮಗಿಂದು ಸ್ಫೂರ್ತಿ. ನಮ್ಮ ಮಕ್ಕಳಿಗೆ ನಮ್ಮ ದೇಶದ ಪರಂಪರೆಯನ್ನು ತಿಳಿಸುವುದು ಅಧ್ಯಾಪಕರ ಕರ್ತವ್ಯವಾಗಿದೆ. ನಮ್ಮ ಪರಂಪರೆಯ ನೈಜ ಅರಿವಾದಾಗ ನಮ್ಮ ಆತ್ಮಶಕ್ತಿ, ಇಚ್ಛಾಶಕ್ತಿ ಜಾಗೃತವಾಗುತ್ತದೆ.



### ವಿಚಾರ ಗೋಷ್ಠಿ

14-07-2012 ರಂದು ಶ್ರೀರಾಮ ವಿದ್ಯಾಕೇಂದ್ರದ ಎಲ್ಲಾ ಶಿಕ್ಷಕರಿಗೆ "ನಮ್ಮ ಗೌರವಶಾಲಿ ಪರಂಪರೆ" ಎಂಬ ವಿಚಾರ ಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಶಿಕ್ಷಕರು ಸಕ್ರಿಯವಾಗಿ ಭಾಗವಹಿಸಿದ್ದರು. ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರು ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯಕ್ಷೇತ್ರಿಯ ಸಂಪರ್ಕ ಪ್ರಮುಖರಾದ ಡಾ। ಪ್ರಭಾಕರ ಭಟ್ ಪ್ರಸ್ತಾವನೆಗೈದರು.

■

"ಸರಯೂ" ಪತ್ರಿಕೆಯ ಬಗೆಗೆ ಹಾಗೂ ವಿದ್ಯಾಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳಿಗೆ ಸ್ವಾಗತ. ಈ ಪತ್ರಿಕೆಯ ಪೋಷಕರಾಗಬಯಸುವವರು ರೂ. 1000/-ದ ಡಿ.ಡಿ./ಚೆಕ್‌ನ್ನು ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ ಹೆಸರಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

**ಸಂಪಾದಕರು, ಸರಯೂ**

ಶ್ರೀರಾಮ ವಿದ್ಯಾಕೇಂದ್ರ, ಹನುಮಾನ್ ನಗರ, ಕಲ್ಲಡ್ಕ, ದ.ಕ.-574 222.

ಸವಿಧೇ ..... ತೆರೆದ ಅಂಚೆ

.....

.....

.....